2. ಪ್ರಶ್ನೋತ್ತರ :

ಅ) ಚುಕ್ಕೆ ಗುರುತಿನ ಪ್ರಶ್ನೆಗಳಿಗೆ ಸದನದಲ್ಲಿ ನೀಡಲಾದ ಉತ್ತರಗಳು.

ಚಿಕ್ಕಬಳ್ಳಾಪುರದಲ್ಲಿ ಗ್ರಂಥಾಲಯ ಕಟ್ಟಡ ನಿರ್ಮಾಣ

91 (781) ಶ್ರೀ ಸಂಪಂಗಿ ಎನ್. (ಬಾಗೇಪಲ್ಲಿ) : ಮಾನ್ಯ ಲೋಕ ಶಿಕ್ಷಣ, ಸಾರ್ವಜನಿಕ ಗ್ರಂಥಾಲಯ, ಸಣ್ಣ ಉಳಿತಾಯ ಮತ್ತು ಲಾಟರಿ ಸಚಿವರ ಪರವಾಗಿ ಮಾನ್ಯ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಚಿಕ್ಕಬಳ್ಳಾಪುರದಲ್ಲಿ ಭಾರತದ ಮಾಜಿ ಪ್ರಧಾನ ಮಂತ್ರಿ ಪಂಡಿತ್ ಜವಹರ್‌ಲಾಲ್ ನೆಹರು ಮತ್ತು ಸರ್. ಎಂ.ವಿಶ್ವೇಶ್ವರಯ್ಯರವರು ಪ್ರಾರಂಭಿಸಿದ ಗ್ರಂಥಾಲಯ ಕಟ್ಟಡವು ಶಿಥಿಲಾವಸ್ಥೆಯಲ್ಲಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಆ) ಬಂದಿದ್ದರೆ, ಆ ಕಟ್ಟಡದ ಕಾರ್ಯ ಎಂದು ಪ್ರಾರಂಭ ಮಾಡಲಾಗುವುದು, ಅದಕ್ಕೆ ಮೀಸಲಿಟ್ಟ ಹಣವೆಷ್ಟು?

ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ (ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು) :

ಅ) ಬಂದಿದೆ.

ಆ) ಈ ಕುರಿತಾಗಿ ರೂ. 160.00 ಲಕ್ಷ ಅನುದಾನ ಮಂಜೂರು ಮಾಡುವಂತೆ ಲೋಕೋಪಯೋಗಿ ಇಲಾಖೆಯನ್ನು ಕೋರಲಾಗಿದೆ. ಸದರಿ ಇಲಾಖೆಯಿಂದ ಅನುದಾನ ಮಂಜೂರಾದ ಕೂಡಲೇ ಕಾಮಗಾರಿ ಪ್ರಾರಂಭಿಸಲಾಗುವುದು.

ಶ್ರೀ ಎನ್. ಸಂಪಂಗಿ : ಮಾನ್ಯ ಅಧ್ಯಕ್ಷರೆ, ಚಿಕ್ಕಬಳ್ಳಾಪುರದಲ್ಲಿ ಸರ್ ಎಂ. ವಿಶ್ವೇಶ್ವರಯ್ಯನವರು ಹಾಗೂ ಪಂಡಿತ್ ಜವಾಹರಲಾಲ್ ನೆಹರುರವರು ಇವರಿಬ್ಬರೂ ಗುದ್ದಲಿ ಪೂಜೆ ಮಾಡಿದ್ದಂಥ ಒಂದು ಗ್ರಂಥಾಲಯವಿದೆ. ಇವತ್ತು ಆ ಕಟ್ಟಡ ಶಿಥಿಲವಾಗಿದೆ. ಅಲ್ಲಿ ನಾಯಿಗಳು ಹಾಗೂ ಭಿಕ್ಷುಕರು ಬಂದು ಮಲಗುತ್ತಾರೆ. ಅಂತಹ ಒಬ್ಬ ಹಿರಿಯ ಮುತ್ಸದ್ದಿಯವರು ಗುದ್ದಲಿ ಪೂಜೆ ಮಾಡಿದಂತಹ ಪ್ರಾಚೀನವಾದ ಒಂದು ಗ್ರಂಥಾಲಯ ಕಟ್ಟಡ ಇವತ್ತು ಆ ಪರಿಸ್ಥಿತಿಗೆ ಬಂದಿದೆ, ಆ ಕಟ್ಟಡವನ್ನು ಕಟ್ಟಲಿಕ್ಕೆ ಇವರ ಬಳಿ ಹಣ ಇಲ್ಲ. ಅವರು ಏನು ಹೇಳುತ್ತಾರೆಂದರೆ, ಲೋಕೋಪಯೋಗಿ ಇಲಾಖೆಗೆ ನಾವು 160 ಲಕ್ಷ ರೂ.ಗಳನ್ನು ಕೇಳಿದ್ದೇವೆ, ಅವರು ಹಣ ಕೊಟ್ಟರೆ ನಾವು

ಮಾಡುತ್ತೇವೆಂದು ಹೇಳುತ್ತಾರೆ. ಇವರಿಗೆ ಪಂಡಿತ್ ಜವಾಹರಲಾಲ್ ನೆಹರುರವರ ಬಗ್ಗೆ ಅಥವಾ ಸರ್ ಎಂ. ವಿಶ್ವೇಶ್ವರಯ್ಯನವರ ಬಗ್ಗೆ ಹಾಗೂ ಇವರು ಕಟ್ಟಿದಂತಹ ಗ್ರಂಥಾಲಯದ ಬಗ್ಗೆ ಇವರಿಗೆ ಯಾವ ತರಹ ಆಸಕ್ತಿ ಇದೆ ಎಂದು ತಾವು ಅರ್ಥ ಮಾಡಿಕೊಳ್ಳಬೇಕು. 160 ಲಕ್ಷ ರೂ. ಗಳನ್ನು PWD ಇಲಾಖೆಯವರು ಬಿಡುಗಡೆ ಮಾಡಿದರೆ ಮಾಡುತ್ತೇವೆಂದು ಹೇಳುತ್ತಾರೆ. ಕೆಂಗೇರಿಯಲ್ಲಿ ಗಾಂಧೀಜಿಯವರು ಓಡಾಡಿದಂತಹ ಸ್ಥಳಕ್ಕೆ ಮಾನ್ಯ ಮುಖ್ಯಮಂತ್ರಿಗಳು ಒಂದು ಕೋಟಿ ರೂಪಾಯಿಗಳನ್ನು ಬಿಡುಗಡೆ ಮಾಡಿದ್ದಾರೆ. ಗಾಂಧೀಜಿಯವರ ಸ್ಥಳಕ್ಕೆ ಒಂದು ಕೋಟಿ ರೂ. ಕೊಟ್ಟಿದ್ದಾರೆ. ಪಂಡಿತ್ ಜವಾಹರಲಾಲ್ ನೆಹರು ಹಾಗೂ ಮಾನ್ಯ ವಿಶ್ವೇಶ್ವೇರಯ್ಯನವರು ಗುದ್ದಲಿ ಪೂಜೆ ಮಾಡಿದಂತಹ ಕಟ್ಟಡಕ್ಕೆ ಇವರ ಹತ್ತಿರ ಹಣ ಇಲ್ಲವೆಂದರೆ ನಿಜವಾಗಿಯೂ ನಮಗೆ ನೋವಾಗತ್ತದೆ. ಇವರು ತತಕ್ಷಣ ಹಣ ಬಿಡುಗಡೆ ಮಾಡುತ್ತಾರಾ ಅಥವಾ ಇಲ್ಲವೋ ಎಂಬುದನ್ನು ಹೇಳಬೇಕು.

ಶ್ರೀ ಬಿ.ಎಸ್. ಯಡಿಯೂರಪ್ಪ (ಮುಖ್ಯಮಂತ್ರಿಗಳು) : ಬಹಳ ಪ್ರಮುಖವಾದಂತಹ ಪ್ರಶ್ನೆಯನ್ನು ತಾವು ಎತ್ತಿದ್ದೀರಿ. ಒಬ್ಬ ಭಾರತದ ಒಬ್ಬ ಮಾಜಿ ಪ್ರಧಾನಿ ಪಂಡಿತ್ ಜವಾಹರಲಾಲ್ ನೆಹರುರವರ ಹೆಸರು ಮತ್ತು ಸರ್ ಎಂ. ವಿಶ್ವೇಶ್ವರಯ್ಯನವರು ಪ್ರಾರಂಭಿಸಿದಂತಹ ಈ ಗ್ರಂಥಾಲಯ ಶಿಥಿಲಾವಸ್ಥೆಯಲ್ಲಿ ಇರುವುದಕ್ಕೆ ಇಷ್ಟು ದಿವಸಗಳಿಂದ ಬಿಟ್ಟಿದ್ದೇವೆ ಎನ್ನುವುದೇ ನಮಗ್ಯಾರು ಗೌರವ ತರುವಂತಹ ಸಂಗತಿ ಅಲ್ಲ. ಅದಕ್ಕೆ ತತಕ್ಷಣ ಅಗತ್ಯ ಹಣವನ್ನು ಬಿಡುಗಡೆ ಮಾಡಿ ಆದಷ್ಟು ಬೇಗ ಇದನ್ನು ಸುವ್ಯವಸ್ಥೆಗೆ ತಂದು ನಮಗೆಲ್ಲರಿಗೂ ಗೌರವ ತರುವ ರೀತಿಯಲ್ಲಿ ಆ ಕಟ್ಟಡವನ್ನು ರಿಪೇರಿ ಹಾಗೂ ಅಭಿವೃದ್ಧಿ ಮಾಡುವುದರ ಕಡೆಗೆ ನಾವು ಗಮನವನ್ನು ಕೊಟ್ಟು ತತಕ್ಷಣ ಆ ಕೆಲಸವನ್ನು ಮಾಡುತ್ತೇವೆ.

ಅಧ್ಯಕ್ಷರು : ಅಷ್ಟು ಆಶ್ವಾಸನೆ ಕೊಟ್ಟ ಮೇಲೆ ಪ್ರಶ್ನೆ ಬೇಡ.

ಡಾ:ಎಂ.ಸಿ.ಸುಧಾಕರ್ : ಸನ್ಮಾನ್ಯ ಮುಖ್ಯ ಮಂತ್ರಿಗಳಲ್ಲಿ ವಿನಂತಿಸಿ ಕೊಳ್ಳುವುದು,.....

ಅಧ್ಯಕ್ಷರು : ಮಾನ್ಯ ಮುಖ್ಯಮಂತ್ರಿಗಳೇ 'ನಾನು ಮಾಡಿಸುತ್ತೇನೆ', ಎಂದು ಹೇಳಿದ ಮೇಲೆ ಇನ್ನೇನು?

ಶ್ರೀ ಬಿ.ಎಸ್. ಯಡಿಯೂರಪ್ಪ (ಮುಖ್ಯಮಂತ್ರಿಗಳು) : ಎಲ್ಲಾ ಕೆಲಸ ಮಾಡಿಸಿ ನಿಮ್ಮ ಜಿಲ್ಲೆಯ ಎಲ್ಲರನ್ನೂ ಕರೆದುಕೊಂಡು ಹೋಗಿ, ಮಾನ್ಯ ಪ್ರತಿಪಕ್ಷದ ನಾಯಕರನ್ನೂ ಕರೆದುಕೊಂಡು ಹೋಗಿ ಒಳ್ಳೆಯ ರೀತಿಯಲ್ಲಿ

ಅದನ್ನು ಪ್ರಾರಂಭ ಮಾಡೋಣ. ನೀವೆಲ್ಲಾ ಸೇರಿ ಅದು ಯಾವ ರೀತಿ ಆಗಬೇಕೆಂದು ಅಪೇಕ್ಷೆ ಪಡುತ್ತೀರೋ ಆ ರೀತಿ ಮಾಡೋಣ.

ಕಾರ್ಕಳದಲ್ಲಿ ಮಹಿಳಾ ಪಾಲಿಟೆಕ್ನಿಕ್ ಕಾಲೇಜ್ ಕಟ್ಟಡ

92 (1406) ಶ್ರೀ ಗೋಪಾಲ ಭಂಡಾರಿ ಹೆಚ್. (ಕಾರ್ಕಳ) : ಮಾನ್ಯ ಉನ್ನತ ಶಿಕ್ಷಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಕಾರ್ಕಳದಲ್ಲಿರುವ ಮಹಿಳಾ ಪಾಲಿಟೆಕ್ನಿಕ್‌ಗೆ ಕಟ್ಟಡ ಕಟ್ಟಲು ಸ್ಥಳವನ್ನು ಒದಗಿಸಿದ್ದರೂ ಕಟ್ಟಡದ ಕೆಲಸ ಪ್ರಾರಂಭವಾಗಿಲ್ಲದಿರುವ ಕಾರಣವೇನು;

ಆ) ಕಟ್ಟಡ ಮಂಜೂರಾತಿಯಾಗಿದೆಯೇ ಹಾಗೂ ಎಷ್ಟು ಮೊತ್ತ ದೊಂದಿಗೆ ಕಾಮಗಾರಿ ನಿರ್ವಹಣೆಯನ್ನು ಯಾವ ಏಜೆನ್ಸಿಯವರು ಪ್ರಾರಂಭ ಮಾಡಿರುತ್ತಾರೆ;

ಇ) ಕಾರ್ಕಳ ತಾಲ್ಲೂಕಿನ ಬೈಲೂರು–ಮುನಿಯಾಲು–ಬಜೆಗೋಲಿಯಲ್ಲಿ ಪದವಿ ಕಾಲೇಜನ್ನು ಸರ್ಕಾರ ಪ್ರಾರಂಭಿಸುವ ಪ್ರಸ್ತಾವನೆ ಇದೆಯೇ;

ಈ) ಹಾಗಿದ್ದಲ್ಲಿ, ಈ ಶೈಕ್ಷಣಿಕ ವರ್ಷದಿಂದ ಪ್ರಾರಂಭಿಸಲಾಗುವುದೆ?

ಶ್ರೀ ಅರವಿಂದ ಲಿಂಬಾವಳಿ (ಉನ್ನತ ಶಿಕ್ಷಣ ಸಚಿವರು) :

ಅ) ಕಾರ್ಕಳದಲ್ಲಿರುವ ಸರ್ಕಾರಿ ಮಹಿಳಾ ಪಾಲಿಟೆಕ್ನಿಕ್‌ಗೆ ಕಟ್ಟಡವನ್ನು ನಿರ್ಮಿಸಲು ಅನುದಾನದ ಲಭ್ಯತೆಯನ್ನು ನೋಡಿ ಕೊಂಡು ಅನುಮೋದನೆ ನೀಡಲಾಗುವುದು.

ಆ) ಸೂಕ್ತ ಸಂದರ್ಭದಲ್ಲಿ ತೀರ್ಮಾನಿಸಲಾಗುವುದು.

ಇ) ಇದೆ.

ಈ) ಅನುದಾನದ ಲಭ್ಯತೆ ಮತ್ತು ಅಗತ್ಯತೆಯ ಆಧಾರ ಮುಂಬರುವ ವರ್ಷಗಳಲ್ಲಿ ಪ್ರಾರಂಭಿಸಲಾಗುವುದು.

ಶ್ರೀ ಕೆ. ಅಭಯ ಚಂದ್ರ ಜೈನ್ (ಶ್ರೀ ಗೋಪಾಲ ಭಂಡಾರಿ ಹೆಚ್. ರವರ ಪರವಾಗಿ) : ಮಾನ್ಯ ಅಧ್ಯಕ್ಷರೆ, ಮಾಡುತ್ತೇವೆಂದು ಹೇಳುತ್ತೀರಿ, ಆದರೆ ಮಹಿಳಾ ಕಾಲೇಜು ಪ್ರಾರಂಭವಾಗಿ ಒಂದು ಸಣ್ಣ ಹಾಲ್‌ನಲ್ಲಿ ನಡೆಯುತ್ತಿದೆ. ಮೂರು ವರ್ಷಗಳು ಕಳೆದರೂ ಇನ್ನೂ ಕೂಡ ಸ್ವಂತ ಕಟ್ಟಡ ಆಗಲಿಲ್ಲ. ಈ ವರ್ಷವಾದರೂ ಆ ಕಟ್ಟಡ ಕಟ್ಟಬೇಕಿತ್ತು. ಈ ವರ್ಷ ಕೂಡ ಬಜೆಟ್‌ನಲ್ಲಿ